# ASSOCIATION OF MANGALORE UNIVERSITY COLLEGE TEACHERS ® AMUCT

Regd. No 8/90 - 91

1st Floor, Nithyananda Complex, A S R P Road, Dongarakeri, Kodialbail, Mangalore-575003

**Affiliated to: Federation of University and College Teachers' Association in Karnataka (FUCTAK) and All India Federation of University and College Teachers' organizations (AIFUCTO)**

***PRESIDENT***
***Dr. UMMAPPA POOJARY P, M.Com.,PhD.***
*Associate Professor in Commerce*
*Shree Gokarnanatheshwara College,*
*Gandhinagar, Mangalore-575003*
*Cell : 9448251230*
*E-mail:president.amuct @gmail.com*

***GENERAL SECRETARY***
***Dr. B A KUMAR HEGDE,,M. Sc., M Phil., Ph D.***
*H O D & Associate Professor of Botony & Biotechnology*
*S D M College (Autonomous), UJIRE – 574214.*
*Cell: 9448842673,*
*E-mail:kumarahegde@yahoo.com*


AMUCT/Pres/16/2017-18 11. 11. 2017

**ಮಾನ್ಯ ಪ್ರಧಾನ ಕಾರ್ಯದರ್ಶಿಗಳು,**
**ಕರ್ನಾಟಕ ಸರಕಾರ (ಉನ್ನತ ಶಿಕ್ಷಣ),**
**ಕರ್ನಾಟಕ ಸರಕಾರದ ಸಚಿವಾಲಯ, ಕೊಠಡಿ ಸಂಖ್ಯೆ 645, 6ನೇ ಮಹಡಿ**
**ಬಹುಮಹಡಿ ಕಟ್ಟಡ, ಡಾ. ಬಿ ಆರ್ ಅಂಬೇಡ್ಕರ್ ರಸ್ತೆ,**
**ಬೆಂಗಳೂರು– 560001**

ಮಾನ್ಯರೇ,

**ವಿಷಯ: ಖಾಸಗೀ ಅನುದಾನಿತ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ನೇಮಕಾತಿ ಸಂದರ್ಭದಲ್ಲಿ ಸೇವೆಯಲ್ಲಿರುವ ಅಭ್ಯರ್ಥಿಗಳನ್ನು ಪರಿಗಣಿಸುವ ಬಗ್ಗೆ**

**ಉಲ್ಲೇಖ : ಸರ್ಕಾರದ ಪತ್ರ ಸಂಖ್ಯೆ:ಇಡಿ/240/ಯುಪಿಸಿ/2014 ದಿ: 01–09–2017.**

ಕಳೆದ ಹಲವಾರು ವರುಷಗಳಿಂದ ಬಾಕಿ ಉಳಿದಿದ್ದ ಖಾಸಗೀ ಅನುದಾನಿತ ಕಾಲೇಜುಗಳ ಬೋಧಕರ ಖಾಲಿ ಹುದ್ದೆಗೆ ನೇಮಕಾತಿ ಆದೇಶವನ್ನು ಸರಕಾರ ಹೊರಡಿಸಿರುವುದನ್ನು ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಸಂಘ, ಅಮುಕ್ತ್ ಸ್ವಾಗತಿಸುತ್ತದೆ. ಕಳೆದ ಎರಡುವರೆ ದಶಕಗಳಿಂದ ಖಾಸಗೀ ಅನುದಾನಿತ ಕಾಲೇಜುಗಳಲ್ಲಿ ನಿವೃತ್ತಿ, ಮರಣ, ರಾಜೀನಾಮೆ ಮುಂತಾದ ಕಾರಣಗಳಿಂದ ಬಹುತೇಕ ಬೋಧಕ ಹುದ್ದೆಗಳು ಖಾಲಿ ಬಿದ್ದಿದ್ದು ಇತ್ತೀಚೆಗಿನ ವರುಷಗಳಲ್ಲಿ ಈ ಹುದ್ದೆಗಳನ್ನು ಕಾಲೇಜುಗಳ ಆಡಳಿತ ಮಂಡಳಿಗಳೇ ಸರಕಾರದ ಯಾವುದೇ ಅನುದಾನವಿಲ್ಲದೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಬೇಕಾದ ಪರಿಸ್ಥಿತಿಯಿದ್ದು, ಖಾಸಗೀ ಅನುದಾನಿತ ಕಾಲೇಜುಗಳ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವಂತೆ ಅಮುಕ್ತ್ ಸೇರಿದಂತೆ ರಾಜ್ಯ ಮಟ್ಟದಲ್ಲಿಯೂ ಬೇಡಿಕೆ ಸಲ್ಲಿಸಿ ಒತ್ತಡ ಹೇರಲಾಗಿತ್ತು. ಇದೀಗ ಮಾನ್ಯ ಉನ್ನತ ಶಿಕ್ಷಣ ಸಚಿವರ ಮುತುವರ್ಜಿಯಿಂದ ಸರಕಾರ ಖಾಸಗೀ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ ಸುಮಾರು 1250 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಒಪ್ಪಿಗೆ ಸೂಚಿಸಿ ಕಾಲೇಜು ಶಿಕ್ಷಣ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆ. ತಮ್ಮ ಬಹುಕಾಲದ ಬೇಡಿಕೆಯೊಂದನ್ನು ಪೂರೈಸುತ್ತಿರುವ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಸರಕಾರ/ಕಾಲೇಜು ಶಿಕ್ಷಣ ಇಲಾಖೆಯನ್ನು ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಸಂಘ, ಅಮುಕ್ತ್ ಮುಕ್ತ ಕಂಠದಿಂದ ಪ್ರಶಂಸಿಸುತ್ತದೆ ಹಾಗೂ ಅಭಿನಂದಿಸುತ್ತದೆ.

www.amuct.org

ಖಾಸಗೀ ಅನುದಾನಿತ ಕಾಲೇಜುಗಳಲ್ಲಿ ಸರಕಾರದ ಯಾವುದೇ ಅನುದಾನವಿಲ್ಲದೆ ತಾತ್ಕಾಲಿಕವಾಗಿ ಕಾಲೇಜುಗಳ ಆಡಳಿತ ಮಂಡಳಿಗಳಿಂದ ನೇಮಕಗೊಂಡು ಸಾವಿರಾರು ಉಪನ್ಯಾಸಕರುಗಳು ಕಳೆದ ಸುಮಾರು 15-20 ವರುಷಗಳಿಗಿಂತಲೂ ಹೆಚ್ಚು ಕಾಲ ಪೂರ್ಣಕಾಲಿಕ ಉಪನ್ಯಾಸಕರಾಗಿ ಮುಂದೊಂದು ದಿನ ಖಾಯಮಾತಿಯಾಗಬಹುದೆನ್ನುವ ನಿರೀಕ್ಷೆಯೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದು ಇದೀಗ ಹೊಸಬರನ್ನು ಆಯ್ಕೆ ಮಾಡಿದಾಗ ತಮ್ಮ ಉದ್ಯೋಗವನ್ನು ಕಳೆದುಕೊಂಡು ಸಂಕಷ್ಟಕ್ಕೆ ಈಡಾಗಲಿದ್ದಾರೆ. ಈ ಉಪನ್ಯಾಸಕರುಗಳಲ್ಲಿ ಅನೇಕರು ನೇಮಕಾತಿಗಾಗಿ ನಿಗಧಿ ಪಡಿಸಲಾದ ವಯೋಮಿತಿಯನ್ನೂ ದಾಟಿದವರಾಗಿದ್ದು ಈಗಾಗಲೇ ಕೌಟುಂಬಿಕ ಜೀವನದ ಹೊಣೆಗಾರಿಕೆಯನ್ನು ಹೊತ್ತು ಕೊಂಡವರಾಗಿರುತ್ತಾರೆ. ಆದುದರಿಂದ ಈ ಉಪನ್ಯಾಸಕರಿಗೆ ನ್ಯಾಯ ಒದಗಿಸುವರೇ ಈಗ ನಡೆಯುವ ನೇಮಕಾತಿ ಪ್ರಕ್ರಿಯೆಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳನ್ನು ಪರಿಗಣಿಸಿ ಅವರಿಗೆ ಅವಕಾಶ ಮಾಡಿಕೊಡಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಮ್ರವಾಗಿ ವಿನಂತಿಸುತ್ತೇವೆ.

ಅದೇ ರೀತಿ ಈ ಪ್ರಕ್ರೀಯೆಯನ್ನು ಅತ್ಯಂತ ಪಾರದರ್ಶಕ ರೀತಿಯಲ್ಲಿ ವಿಳಂಬವಿಲ್ಲದೆ ಮಾಡಬೇಕಾಗಿ ಸರಕಾರವನ್ನು ಕೇಳಿಕೊಳ್ಳುತ್ತೇವೆ. ತಾವು ನಮ್ಮ ಮನವಿಯನ್ನು ಪರಿಶೀಲಿಸಿ ಕಾಲೇಜು ಅಧ್ಯಾಪಕ ವೃಂದಕ್ಕೆ ನ್ಯಾಯ ಒದಗಿಸಿಕೊಡುತ್ತೀರೆಂದು ನಂಬಿದ್ದೇವೆ.

ವಂದನೆಗಳೊಂದಿಗೆ,

ಇತೀ ತಮ್ಮ ವಿಶ್ವಾಸಿಗಳು,

ಡಾ. ಉಮ್ಮಪ್ಪ ಪೂಜಾರಿ. ಪಿ
ಅಧ್ಯಕ್ಷ

ಡಾ. ಬಿ ಎ. ಕುಮಾರ್ ಹೆಗ್ಡೆ
ಪ್ರಧಾನ ಕಾರ್ಯದರ್ಶಿ

ಪ್ರತಿಗಳು:

1. ಶ್ರೀ ಬಸವರಾಜ್ ರಾಯರೆಡ್ಡಿ, ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರಕಾರ.
2. ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ಶ್ರೀ ಬಸವರಾಜ್ ಹೊರಟ್ಟಿ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಬೆಂಗಳೂರು
4. ಶ್ರೀ ಜೆ.ಆರ್ ಲೋಬೊ, ಮಾನ್ಯ ವಿಧಾನ ಸಭಾ ಸದಸ್ಯರು, ಮಂಗಳೂರು ದಕ್ಷಿಣ ವಿಧಾನ ಸಭಾ ಕ್ಷೇತ್ರ. ಮಂಗಳೂರು
5. ಕ್ಯಾ. ಗಣೇಶ್ ಕಾರ್ಣಿಕ್ , ಮಾನ್ಯ ವಿಧಾನ ಪರಿಷತ್ ಸದಸ್ಯರು, ಮಂಗಳೂರು
6. ಶ್ರೀ ಐವನ್ ಡಿ'ಸೋಜ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಮಂಗಳೂರು
7. ಡಾ.ಎನ್.ಬಿ. ಸಂಗಾಪುರ, ಅಧ್ಯಕ್ಷರು, ರಾಜ್ಯ ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಶಿಕ್ಷಕರ ಸಂಘಟನೆಗಳ ಒಕ್ಕೂಟ. ದಾರವಾಡ

www.amuct.org

www.amuct.org